ಕರ್ನಾಟಕ ಸರ್ಕಾರ – ಅರಣ್ಯ ಇಲಾಖೆ

ಪ್ರಧಾನ ಮುಖ್ಯ ಅರಣ್ಯ ಸಂರಕ್ಷಣಾಧಿಕಾರಿ (ಮುಖ್ಯಸ್ಥರು, ಅರಣ್ಯ ಪಡೆ) ಹಾಗೂ ಆಯ್ಕೆ ಪ್ರಾಧಿಕಾರ ಇವರ ಕಛೇರಿ, ಅರಣ್ಯ ಭವನ, ಮಲ್ಲೇಶ್ವರಂ, ಬೆಂಗಳೂರು–560003

# ಪ್ರಕಟಣೆ

ಅಧಿಸೂಚನೆ ಸಂಖ್ಯೆ: ಬಿ9–ವಅಅ–ವಿವ–5/2014–15, ದಿನಾಂಕ: 29–10–2014

## 110 ವಲಯ ಅರಣ್ಯಾಧಿಕಾರಿ ಹುದ್ದೆಗಳಿಗೆ ನೇರ ನೇಮಕಾತಿ

–0–

ದಿನಾಂಕ 20–02–2016 ರಂದು 98 ವಲಯ ಅರಣ್ಯಾಧಿಕಾರಿ ಹುದ್ದೆಗಳಿಗೆ ಆಯ್ಕೆಗೊಂಡ ಅಭ್ಯರ್ಥಿಗಳ ಗಮನಕ್ಕೆ ಈ ಕೆಳಕಂಡ ವಿಷಯವನ್ನು ತರಲಾಗಿದೆ.

| | |
|---|---|
| 1) | ಅಭ್ಯರ್ಥಿಗಳು ಎಲ್ಲಾ ಮೂಲ ದಾಖಲಾತಿಗಳೊಂದಿಗೆ ಹಾಗೂ ಇತೀಚೆಗಿನ 2 ಭಾವಚಿತ್ರದೊಂದಿಗೆ ದಿನಾಂಕ 05–03–2016 ರಂದು ಪೂರ್ವಾಹ್ನ 10.30 ಗಂಟೆಗೆ ಮುಖ್ಯ ಅರಣ್ಯ ಸಂರಕ್ಷಣಾಧಿಕಾರಿ, ಬೆಳಗಾವಿ ವೃತ್ತ, ಬೆಳಗಾವಿ ಇವರ ಸಮ್ಮುಖದಲ್ಲಿ ಹಾಜರಾಗುವುದು. |
| 2) | ಅಭ್ಯರ್ಥಿಗಳು ಎಲ್ಲಾ ಮೂಲ ದಾಖಲಾತಿಗಳೊಂದಿಗೆ ಅದರ 3 ಜೆರಾಕ್ಸ್ ಪ್ರತಿಗಳನ್ನು (Self Attested) ಸಲ್ಲಿಸುವುದು. |
| 3) | ಅಭ್ಯರ್ಥಿಗಳು ದಿನಾಂಕ 21–03–2016 ರಿಂದ ಗುಜರಾತಿನ ವಲಯ ಅರಣ್ಯಾಧಿಕಾರಿ ಹುದ್ದೆಯ ತರಬೇತಿ ಸಂಸ್ಥೆಯಲ್ಲಿ 48 ಅಭ್ಯರ್ಥಿಗಳು ಹಾಗೂ 50 ಅಭ್ಯರ್ಥಿಗಳು ಗುಂಗರಗಟ್ಟಿ, ಧಾರವಾಡ ತರಬೇತಿ ಸಂಸ್ಥೆಯಲ್ಲಿ ತರಬೇತಿಯನ್ನು ಪಡೆಯಲು ಈಗಾಗಲೇ ಡೈರೆಕ್ಟರ್ ಆಫ್ ಫಾರೆಸ್ಟ್ ಎಜುಕೇಶನ್, ಡೆಹರಾಡೂನ್ ಇವರ ಪತ್ರ ದಿನಾಂಕ 23–02–2016 ರಲ್ಲಿ ನಿರ್ದೇಶಿಸಲ್ಪಟ್ಟಿರುತ್ತದೆ. ಈ ವಿವರವನ್ನು ಇಲಾಖಾ ವೆಬ್‌ಸೈಟ್‌ನಲ್ಲಿ ಪ್ರಕಟಿಸಲಾಗಿದೆ. ಹೀಗಾಗಿ ಅಭ್ಯರ್ಥಿಗಳು ಆಯಾ ತರಬೇತಿ ಸಂಸ್ಥೆಗೆ ದಿನಾಂಕ 20–03–2016 ರಂದು ಹಾಜರಾಗಲು ಸೂಕ್ತ ವ್ಯವಸ್ಥೆಯನ್ನು ಮಾಡಿಕೊಳ್ಳುವುದು. |
| 4) | ಅಭ್ಯರ್ಥಿಗಳು ದಿನಾಂಕ 05–03–2016 ರಂದು ಹಾಜರಿರುವ ಸಮಯದಲ್ಲಿ ರೂ. 100–00 ಛಾಪಾ ಕಾಗದದಲ್ಲಿ ಎರಡು ರೀತಿಯ ಕರಾರು ಪತ್ರಗಳನ್ನು ಬೆರಳಚ್ಚು ಮಾಡಿಸಿಕೊಂಡು ಅಭ್ಯರ್ಥಿಯ ಪೂರ್ಣ ಮಾಹಿತಿಯನ್ನು ಛಾಪಾ ಕಾಗದದಲ್ಲಿ ನಮೂದಿಸುವುದು. (Copy of the undertaking is published in Website) |
| 5) | ಛಾಪಾ ಕಾಗದದಲ್ಲಿ ಬೆರಳಚ್ಚು ಮಾಡಿಸಬೇಕಾದ ಮಾಹಿತಿಯನ್ನು ಇಲಾಖಾ ವೆಬ್‌ಸೈಟ್‌ನಲ್ಲಿ ಪ್ರಕಟಿಸಲಾಗಿದೆ. ಅದರಂತೆ ಬೆರಳಚ್ಚು ಮಾಡಿಸುವುದು. ಮುಂದುವರೆದು, ಅಭ್ಯರ್ಥಿಯು ಇಂಡೆಮ್ನಿಟಿ ಬಾಂಡಿನಲ್ಲಿ ಇಬ್ಬರು ಜಾಮೀನುದಾರರ, ಹೆಸರು, ಪೂರ್ಣ ವಿಳಾಸ, ಇತ್ಯಾದಿಯನ್ನು ಇಂಡೆಮ್ನಿಟಿ ಬಾಂಡಿನಲ್ಲಿ ನಮೂದಿಸುವುದು. ಈ ಇಬ್ಬರು ಜಾಮೀನುದಾರರು ರೂ. 14,550/– ಗಿಂತ ಹೆಚ್ಚು ಮಾಸಿಕ ವೇತನ ಪಡೆಯುತ್ತಿರುವ ಮತ್ತು ತರಬೇತಿ ಮುಗಿಯುವ ದಿನಾಂಕದಿಂದ ಕನಿಷ್ಠ 6 ವರ್ಷ ಸೇವಾವಧಿ ಉಳಿದಿರುವ ಇಬ್ಬರು ಸರ್ಕಾರಿ ನೌಕರರ ಜಾಮೀನು ಕೊಡಬೇಕು. |

| | |
|---|---|
| 6) | ಒಂದು ವೇಳೆ ಅಭ್ಯರ್ಥಿಯು ಸರಕಾರಿ ಜಾಮೀನುದಾರರನ್ನು ಒದಗಿಸದೇ ಹೋದಲ್ಲಿ ಅಭ್ಯರ್ಥಿಯು ರೂ.1,00,000–00 ಮೊತ್ತದ ರಾಷ್ಟ್ರೀಯ ಉಳಿತಾಯ ಸರ್ಟಿಫಿಕೇಟನ್ನು ಪ್ರಧಾನ ಮುಖ್ಯ ಅರಣ್ಯ ಸಂರಕ್ಷಣಾಧಿಕಾರಿ (ಮುಖ್ಯಸ್ಥರು, ಅರಣ್ಯ ಪಡೆ), ಬೆಂಗಳೂರು ಇವರ ಹೆಸರಿಗೆ ಅಡವು ಇರಿಸಬಹುದು. ಇದಕ್ಕಾಗಿ ಪ್ರತ್ಯೇಕವಾದ ಇಂಡೆಮ್ನಿಟಿ ಬಾಂಡನ್ನು ಸಿದ್ಧಪಡಿಸಿ, ಇಲಾಖಾ ವೆಬ್‌ಸೈಟ್‌ನಲ್ಲಿ ಪ್ರಕಟಿಸಲಾಗಿದೆ. ಇದರಂತೆ ರೂ.100–00ರ ಛಾಪಾ ಕಾಗದದಲ್ಲಿ ಬೆರಳಚ್ಚು ಮಾಡಿಸುವುದು. ಇದನ್ನು ನೋಟರಿ ಮಾಡಿಸುವ ಅವಶ್ಯಕತೆ ಇರುವುದಿಲ್ಲ. |
| 7) | ಅಭ್ಯರ್ಥಿಗಳು ಇಂಡೆಮ್ನಿಟಿ ಬಾಂಡಿನಲ್ಲಿ ಇಬ್ಬರು ಜಾಮೀನುದಾರರು ರೂ.14,550/– ಗಿಂತ ಹೆಚ್ಚು ಮಾಸಿಕ ವೇತನ ಪಡೆಯುತ್ತಿರುವ ಮತ್ತು ತರಬೇತಿ ಮುಗಿಯುವ ದಿನಾಂಕದಿಂದ ಕನಿಷ್ಠ 6 ವರ್ಷ ಸೇವಾವಧಿ ಉಳಿದಿರುವ ಇಬ್ಬರು ಸರ್ಕಾರಿ ನೌಕರರ ಜಾಮೀನು ನೀಡುವವರು ಜಾಮೀನುದಾರರ ವೇತನ ದೃಢೀಕರಣ ಪತ್ರ (Issued by the Controlling Officer of the Office where the Official is working) ಹಾಗೂ ಜಾಮೀನುದಾರರ ಐ.ಡಿ. ಕಾರ್ಡಿನ (Self Attested) ಜೆರಾಕ್ಸ್ ಪ್ರತಿಯನ್ನು ಇಲಾಖೆಗೆ ಕೊಡಬೇಕು. |
| 8) | ಜಾಮೀನುದಾರರು ಹಾಗೂ ಅಭ್ಯರ್ಥಿಯು ಇಂಡೆಮ್ನಿಟಿ ಬಾಂಡಿನಲ್ಲಿ ಸಹಿ ಮಾಡುವಾಗ ಯಾವುದಾದರೂ ನೋಟರಿ ಅಧಿಕಾರಿ ಮುಂದೆ ಸಹಿ ಮಾಡಿ ನೋಟರಿಯವರ ಸಹಿಯನ್ನು ಇಂಡೆಮ್ನಿಟಿ ಬಾಂಡಿನಲ್ಲಿ ಮಾಡಿಸುವುದು ಹಾಗೂ ಇಬ್ಬರು ಸಾಕ್ಷಿದಾರರ ಸಹಿ ಹಾಗೂ ಪೂರ್ಣ ವಿಳಾಸವನ್ನು ಕರಾರು ಪತ್ರ ಹಾಗೂ ಇಂಡೆಮ್ನಿಟಿ ಬಾಂಡಿನಲ್ಲಿ ಮಾಡಿಸುವುದು. ಹೀಗಾಗಿ, ಜಾಮೀನುದಾರರು/ಸಾಕ್ಷಿದಾರರು ನಿಮ್ಮ ಜೊತೆಯಲ್ಲಿ ಬೆಳಗಾವಿಗೆ ಬರುವ ಅವಶ್ಯಕತೆ ಇರುವುದಿಲ್ಲ. |
| 9) | ಎಲ್ಲಾ ಅಭ್ಯರ್ಥಿಗಳಿಗೆ ದಿನಾಂಕ 21–03–2016 ರಿಂದ 18 ತಿಂಗಳ ತರಬೇತಿ ಪ್ರಾರಂಭವಾಗುವ ಹಿನ್ನೆಲೆಯಲ್ಲಿ ಹಾಜರುಪಡಿಸುವ ಎಲ್ಲಾ ಮೂಲ ದಾಖಲೆಗಳ ಸಿಂಧುತ್ವ/ಪೊಲೀಸ್ ಇಲಾಖೆಯ ವರದಿ ಬರುವ ಸಾಧ್ಯತೆ ಕಡಿಮೆ ಇರುತ್ತದೆ. ಆದಾಗ್ಯೂ ಆಡಳಿತಾತ್ಮಕ ಹಿತದೃಷ್ಟಿಯಿಂದ ರೂ.100–00ರ ಛಾಪಾ ಕಾಗದದಲ್ಲಿ ಈ ಬಗ್ಗೆ ಈ ಕುರಿತಾದ ಕರಾರು ಪತ್ರವನ್ನು ಅರಣ್ಯ ಇಲಾಖೆಗೆ ಅಭ್ಯರ್ಥಿಯು ಬರೆದು ಕೊಡಬೇಕು. ಇದನ್ನು ಸಹ ಅಭ್ಯರ್ಥಿಯು ನೋಟರಿಯವರ ಸಮ್ಮುಖದಲ್ಲಿ ಸಹಿ ಮಾಡಿಸಿ ಸಲ್ಲಿಸುವುದು. |
| 10) | ಅಭ್ಯರ್ಥಿಯು ಬೇರೊಂದು ಇಲಾಖೆಯಲ್ಲಿ ಪ್ರಸ್ತುತ ಕರ್ತವ್ಯ ನಿರ್ವಹಿಸುತ್ತಿದ್ದಲ್ಲಿ ಅಥವಾ ಅರಣ್ಯ ಇಲಾಖೆಯಲ್ಲಿಯೇ ಸೇವೆ ಸಲ್ಲಿಸುತ್ತಿದ್ದಲ್ಲಿ ಪ್ರಸ್ತುತ ಸೇವೆ ಸಲ್ಲಿಸುವ ಕಛೇರಿಯಿಂದ ನಿಯಮಾನುಸಾರ ಕಾರ್ಯವಿಮುಕ್ತಿ ಹೊಂದಿ ದಿನಾಂಕ 05–03–2016 ರಂದು ಈ ಆದೇಶವನ್ನು ಇಲಾಖೆಗೆ ನೀಡತಕ್ಕದ್ದು. |
| 11) | ಅಭ್ಯರ್ಥಿಗಳಿಗೆ ಕೆಲವು ನಿಬಂಧನೆಗಳ ಮೇರೆಗೆ ವಲಯ ಅರಣ್ಯಾಧಿಕಾರಿ ಹುದ್ದೆಗೆ ನೇಮಕಾತಿ ಆದೇಶವನ್ನು ನೀಡಲಾಗುವುದು. |
| 12) | ಎಲ್ಲಾ ಅಭ್ಯರ್ಥಿಗಳು ಎಲ್ಲಾ ಮೂಲ ದಾಖಲೆಗಳನ್ನು ಹಾಜರುಪಡಿಸಿದಲ್ಲಿ ಹಾಗೂ ಮೇಲ್ಕಂಡ ಇಂಡೆಮ್ನಿಟಿ ಬಾಂಡನ್ನು ನೀಡಿದ್ದಲ್ಲಿ ಅಂತಹ ಅಭ್ಯರ್ಥಿಗೆ ಮಾತ್ರ ದಿನಾಂಕ 11–03–2016 ರಂದು ನೇಮಕಾತಿ ಆದೇಶ ನೀಡಲಾಗುವುದು. |

| | |
|---|---|
| 13) | ಅಭ್ಯರ್ಥಿಗಳು ನೇಮಕಾತಿ ಆದೇಶವನ್ನು ಇಲಾಖಾ ವೆಬ್‌ಸೈಟ್‌ನಿಂದ ಡೌನಲೋಡ್ ಮಾಡಿಕೊಂಡು ದಿನಾಂಕ 14-03-2016 ರಂದು ಮುಖ್ಯ ಅರಣ್ಯ ಸಂರಕ್ಷಣಾಧಿಕಾರಿ (ತರಬೇತಿ), ಗುಂಗರಗಟ್ಟಿ, ಧಾರವಾಡ ಇವರ ಸಮ್ಮುಖ ಕರ್ತವ್ಯಕ್ಕೆ ಹಾಜರಾಗುವುದು. |
| 14) | ಮುಖ್ಯ ಅರಣ್ಯ ಸಂರಕ್ಷಣಾಧಿಕಾರಿ (ತರಬೇತಿ), ಗುಂಗರಗಟ್ಟಿ, ಧಾರವಾಡ ಇವರು ಎಲ್ಲಾ ಅಭ್ಯರ್ಥಿಗಳನ್ನು ಕರ್ತವ್ಯಕ್ಕೆ ಕಾರ್ಯವರದಿ ಮಾಡಿಸಿಕೊಂಡು ಎಲ್ಲಾ ಅಭ್ಯರ್ಥಿಗಳ ಸೇವಾ ಪುಸ್ತಕ, ವೇತನ, ಭತ್ಯೆ ಇತ್ಯಾದಿಗಳಿಗೆ ಬೇಕಾದ ಎಲ್ಲಾ ಸಿದ್ಧತೆಗಳನ್ನು ಮಾಡಿಕೊಳ್ಳುವುದು. |
| 15) | ಮುಖ್ಯ ಅರಣ್ಯ ಸಂರಕ್ಷಣಾಧಿಕಾರಿ (ತರಬೇತಿ), ಗುಂಗರಗಟ್ಟಿ, ಧಾರವಾಡ ಇವರು ಮೇಲ್ಕಂಡ ಎಲ್ಲಾ ಕ್ರಮಗಳನ್ನು ಕೈಗೊಂಡು 48 ಅಭ್ಯರ್ಥಿಗಳನ್ನು (ಗುಜರಾತ್ ತರಬೇತಿ ಸಂಸ್ಥೆಗೆ) ನಿಯೋಜಿಸಲ್ಪಟ್ಟವರು ತಮ್ಮ ಕಚೇರಿಯಿಂದ ದಿನಾಂಕ 17-03-2016 ಕಾರ್ಯವಿಮುಕ್ತಿಗೊಳಿಸಿ, ದಿನಾಂಕ 20-03-2016 ರಂದು ಗುಜರಾತ್ ತರಬೇತಿ ಸಂಸ್ಥೆಯಲ್ಲಿ ಹಾಜರಾಗುವಂತೆ ಅಭ್ಯರ್ಥಿಗಳಿಗೆ ಸೂಕ್ತ ಮಾರ್ಗದರ್ಶನ ನೀಡುವುದು. ಉಳಿದ 50 ಅಭ್ಯರ್ಥಿಗಳು ತಮ್ಮಲ್ಲಿಯೇ ತರಬೇತಿಗಾಗಿ ಹಾಜರಾಗಲು ಕ್ರಮ ಕೈಗೊಳ್ಳುವುದು. |
| 16) | ಅಭ್ಯರ್ಥಿಗಳು ಅನಾವಶ್ಯಕವಾಗಿ ಇಲಾಖೆಯ ಹಿರಿಯ ಅಧಿಕಾರಿಗಳ/ಸಿಬ್ಬಂದಿಗಳ ದೂರವಾಣಿಗೆ ಕರೆಮಾಡಿ ಅನಗತ್ಯವಾದ ವಿಚಾರವನ್ನು ದೂರವಾಣಿಯಲ್ಲಿ ಚರ್ಚಿಸುವ ಅಭ್ಯಾಸ ಮಾಡಿಕೊಂಡಿರುವುದು ಈ ಕೆಳಸಹಿದಾರರ ಗಮನಕ್ಕೆ ಬಂದಿರುತ್ತದೆ. **ಯಾವುದೇ ಅಭ್ಯರ್ಥಿಯು ದೂರವಾಣಿ ಕರೆಗಳನ್ನು ಮಾಡಬಾರದಾಗಿ ಎಚ್ಚರಿಕೆ ನೀಡಲಾಗಿದೆ.** ಎಲ್ಲಾ ಮಾಹಿತಿಗಳು ಇಲಾಖಾ ವೆಬ್‌ಸೈಟ್‌ನಲ್ಲಿ ಪ್ರಕಟಿಸಲಾಗುತ್ತದೆ. ಯಾವುದೇ ಮಾಹಿತಿ ಬೇಕಾಗಿದ್ದಲ್ಲಿ ನಿಗದಿತ ಅವಧಿಯಲ್ಲಿ ಖುದ್ದು ಹಾಜರಾಗಿ ಮಾಹಿತಿ ಪಡೆಯಬಹುದು. |

**ಪ್ರಧಾನ ಮುಖ್ಯ ಅರಣ್ಯ ಸಂರಕ್ಷಣಾಧಿಕಾರಿ**
**(ಮುಖ್ಯಸ್ಥರು, ಅರಣ್ಯ ಪಡೆ)**

ಬೆಂಗಳೂರು,
ದಿನಾಂಕ: 26-02-2016

1) ಪ್ರತಿಯನ್ನು ಅಪರ ಪ್ರಧಾನ ಮುಖ್ಯ ಅರಣ್ಯ ಸಂರಕ್ಷಣಾಧಿಕಾರಿ (ಮೌಲ್ಯಮಾಪನ, ಕಾರ್ಯಯೋಜನೆ, ಸಂಶೋಧನೆ ಮತ್ತು ತರಬೇತಿ), ಅರಣ್ಯ ಭವನ, ಬೆಂಗಳೂರು ಇವರಿಗೆ ಮಾಹಿತಿಗಾಗಿ ಹಾಗೂ ಮುಂದಿನ ಕ್ರಮಕಾಗಿ ಕಳುಹಿಸಲಾಗಿದೆ.

2) ಮುಖ್ಯ ಅರಣ್ಯ ಸಂರಕ್ಷಣಾಧಿಕಾರಿ (ತರಬೇತಿ), ಗುಂಗರಗಟ್ಟಿ, ಧಾರವಾಡ ಇವರಿಗೆ ಮುಂದಿನ ಕ್ರಮಕ್ಕಾಗಿ ಕಳುಹಿಸಲಾಗಿದೆ.